## ಮಾಧ್ಯಮ ಭಾಷಾ ದೀಪಿಕೆ




**ಪತ್ರಕರ್ತರಲ್ಲಿ** ಭಾಷೆಯ ಬಗ್ಗೆ ಎಚ್ಚರ ಹಾಗೂ ಕಾಳಜಿಯನ್ನು ರೂಪಿಸುವ ಮಹತ್ವಾಕಾಂಕ್ಷೆಯ ಕೃತಿ 'ಮಾಧ್ಯಮ ಭಾಷಾ ದೀಪಿಕೆ'. ಕೃತಿಯ ಶೀರ್ಷಿಕೆಯಲ್ಲಿನ 'ಮಾಧ್ಯಮ' ಪದವನ್ನು ಹೊರತುಪಡಿಸಿ ನೋಡಲು ಈ ಕೃತಿಯ ಸ್ವರೂಪವೇ ಒತ್ತಾಯಿಸುವಂತಿದೆ. ಈ ಕೃತಿಯಲ್ಲಿನ ವಿವರಗಳು ಪತ್ರಕರ್ತರಿಗೆ ಮಾತ್ರವಲ್ಲ, ಎಲ್ಲ ಬರಹಗಾರರಿಗೂ ಭಾಷೆ ಮತ್ತು ಬರವಣಿಗೆಯಲ್ಲಿ ಉಳಿಸಿಕೊಳ್ಳಬೇಕಾದ ಎಚ್ಚರವನ್ನು ಮನದಟ್ಟು ಮಾಡುವಂತಹವು.

ಪ್ರಾಥಮಿಕ ಶಿಕ್ಷಣದ ತಳಹದಿ ಶಿಥಿಲವಾಗಿರುವುದರಿಂದಲೋ, ಇಂಗ್ಲಿಷಿನ ಪ್ರಭಾವಳಿಯಿಂದಲೋ ಅಥವಾ ಮತ್ತೊಂದು ಕಾರಣದಿಂದಲೋ, ಕನ್ನಡ ಭಾಷೆಯ ಮೇಲಿನ ಹಿಡಿತವನ್ನು ಕನ್ನಡಿಗರು ಕಳೆದುಕೊಳ್ಳುತ್ತಿರುವುದಕ್ಕೆ ಉದಾಹರಣೆಯಾಗಿ ದೃಶ್ಯ ಮಾಧ್ಯಮಗಳನ್ನೂ, ಪತ್ರಿಕೆಗಳನ್ನೂ, ಸಾಹಿತ್ಯ ಕೃತಿಗಳನ್ನೂ ಗಮನಿಸಬಹುದು. ಸರಿಯಾದ ಭಾಷೆ ಬಳಸುತ್ತಿದ್ದೇವೆ ಎನ್ನುವ ಆತ್ಮವಿಶ್ವಾಸದಲ್ಲೇ ಅನೇಕರು ತಪ್ಪು ತಪ್ಪಾಗಿ ಮಾತು-ಬರವಣಿಗೆಯಲ್ಲಿ ತೊಡಗಿರುತ್ತಾರೆ. ಅಂಥವರಿಗೆ ಈ ದೀಪಿಕೆ ಕೈಗನ್ನಡಿಯಾಗಬಲ್ಲದು.

ಪದ್ಮರಾಜರು ದೀರ್ಘಕಾಲ ಪತ್ರಿಕಾ ವ್ಯವಸಾಯದಲ್ಲಿ ನಿರತರಾಗಿದ್ದವರು. ಭಾಷೆಯ ಬಗ್ಗೆ ಪ್ರೀತಿ, ಕುತೂಹಲ ಮತ್ತು ಎಚ್ಚರವನ್ನು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಂಡವರು. ಅದರ ಫಲವಾಗಿಯೇ ಮಾಧ್ಯಮದ ಭಾಷೆಯ ಬಗ್ಗೆ ಅವರು ನಿರಂತರವಾಗಿ ಯೋಚಿಸುತ್ತಾ ಬಂದಿದ್ದಾರೆ, ತಮ್ಮ ವಿಚಾರಗಳನ್ನು ಬರೆಯುತ್ತಲೂ ಬಂದಿದ್ದಾರೆ. ಈ ನಿಟ್ಟಿನಲ್ಲಿ ಅವರ 'ಪತ್ರಿಕಾ ಭಾಷೆ' ಕೃತಿ ಮಾಧ್ಯಮ ವಿದ್ಯಾರ್ಥಿಗಳ ಗಮನಸೆಳೆದಿದೆ. ಆ ಕೃತಿಯ ಕೊಂಡಿಯ ರೂಪದಲ್ಲಿ 'ಮಾಧ್ಯಮ ಭಾಷಾ ದೀಪಿಕೆ'ಯನ್ನು ಗಮನಿಸಬಹುದು.

ಪದ್ಮರಾಜರು ಪತ್ರಕರ್ತರಷ್ಟೇ ಅಲ್ಲ, ಸೃಜನಶೀಲ ಸಾಹಿತ್ಯದ ಬರಹಗಾರರೂ ಹೌದು. ಮಾಧ್ಯಮ ವಿದ್ಯಾರ್ಥಿಯಾದುದರಿಂದ ಹಾಗೂ ಮಾಧ್ಯಮಗಳಲ್ಲಿ ಪ್ರಕಟಗೊಂಡ ಉದಾಹರಣೆಗಳನ್ನು ಚರ್ಚೆಗೆ ಬಳಸಿಕೊಂಡಿರುವುದರಿಂದ, ಪ್ರಸಕ್ತ ಕೃತಿಯನ್ನು 'ಮಾಧ್ಯಮ ಭಾಷಾ ದೀಪಿಕೆ' ಎಂದು ಹೆಸರಿಸಿರುವುದು ಸರಿಯಾಗಿದೆ. ಆದರೆ, ಭಾಷಾ ಕಲಿಕೆಯ ನಿಟ್ಟಿನಲ್ಲಿ ಮಾಧ್ಯಮಗಳು ಪಠ್ಯಗಳ ರೂಪದಲ್ಲಿ ಒದಗಿಬರುವುದರಿಂದ ಈ ಕೃತಿ ಭಾಷೆಯ ಬಗ್ಗೆ ಕಾಳಜಿಯುಳ್ಳ ಎಲ್ಲರೂ ಗಮನಿಸಬೇಕಾದುದಾಗಿದೆ. ನಿತ್ಯದ ಬರವಣಿಗೆಯಲ್ಲಿನ ದೋಷಗಳನ್ನು ಉದಾಹರಣೆಗಳೊಂದಿಗೆ ಚರ್ಚಿಸುವ ಭಾಷಾ ದೀಪಿಕೆ, ಹೊಸ ತಲೆಮಾರಿನ ಭಾಷೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಉಪಯುಕ್ತ ಪಠ್ಯದಂತಿದೆ.

**ಲೇ: ಪದ್ಮರಾಜ ದಂಡಾವತಿ; ಪು: 314; ಬೆ: ₹ 300, ಪ್ರ: ವಿಕಾಸ ಪ್ರಕಾಶನ, ಬೆಂಗಳೂರು.**
**ಫೋನ್: 9900020489**